EN/02/May-June/2023

# ಬಿಲೀವರ್ಸ್ ಈಸ್ಟರ್ನ್ ಚರ್ಚ್

ಮೆಟ್ರೊಪಾಲಿಟನ್ ಕಛೇರಿಯಿಂದ, ಸಿನಡ್ ಸೆಕ್ರಟರಿಯೇಟ್, ಸೆಂಟ್ ತೋಮಸ್ ಸಮುದಾಯ, ತಿರುವಲ್ಲ ಕೇರಳ, ಭಾರತ.

# ಕುರುಬನ ಪತ್ರ

ಮೇ/ಜೂನ್ ೨೦೨೩

ಎಲ್ಲಾ ಆರ್ಚ್ ಬಿಷಪರು, ಬಿಷಪರು, ಘನಬೋಧಕರು, ಡೀಕನ್ ಫಾದರ್ಸ್, ಸುವಾರ್ತಿಕರು ಮತ್ತು ಕರುಣೆಯ ಸಹೋದರಿಯರು ಹಾಗೂ ಪ್ರಪಂಚದಾದ್ಯಂತದ ಬಿಲೀವರ್ಸ್ ಈಸ್ಟರ್ನ್ ಚರ್ಚ್ನ ಎಲ್ಲಾ ನಂಭಿಗಸ್ಥರಿಗೂ ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ಆಶೀರ್ವಾದ ಮತ್ತು ವಂದನೆಗಳು.

ನಾವು ಈಗ ಪಂಚಾಶತ್ತಮದ ಋತುವಿನಲ್ಲಿ ಇದ್ದೇವೆ. ಮೇಲಂತಸ್ಥಿನಲ್ಲಿ ಶಿಷ್ಯರ ಮೇಲೆ ಪವಿತ್ರಾತ್ಮದ ಹೊರಹರಿವನ್ನು ಚರ್ಚ್ ನೆನಪಿಸಿಕೊಳ್ಳುವ ಮತ್ತು ಈ ವರ್ಷದಲ್ಲಿ ನಮ್ಮ ಜೀವನದಲ್ಲಿಯೂ ಪವಿತ್ರಾತ್ಮನ ಸಬಲೀಕರಣವನ್ನು ಕೇಳುವ ಸಮಯವಿದು. ಆ, ಕೃತ್ಯಗಳು ೧:೮ ರಲ್ಲಿ ಹೇಳಿರುವ ಪ್ರಕಾರ ಕರ್ತನಾದ ಯೇಸು ಕ್ರಿಸ್ತನಿಗೆ ನಾವು ಸಾಕ್ಷಿಗಳಾಗಿರಲು ಪವಿತ್ರಾತ್ಮನು ನಮಗೆ ಬಲವನ್ನು ನೀಡುತ್ತಾನೆ. ನಾವು ಪತಿಯೊಬ್ಬರೂ ನಮ್ಮ ಸ್ವಂತ ಜೀವನದಲ್ಲಿ ಕರ್ತನಾದ ಯೇಸು ಕ್ರಿಸ್ತನಿಗೆ ಹೇಗೆ ಪರಿಣಾಮಕಾರಿಯಾದ ಸಾಕ್ಷಿಯಾಗಿರಬಹುದು ಎಂಬುದನ್ನು ನಿಮ್ಮ ನೆನಪಿಗೆ ತರಲು ಬಯಸುತ್ತೇನೆ.

**<u>ಮನೆಯಲ್ಲಿ ದೈನಂದಿನ ಪ್ರಾರ್ಥನೆ</u>:** ನಮ್ಮ ಕುಟುಂಬವು ಪ್ರತಿದಿನ ಒಟ್ಟಾಗಿ ಸೇರಿ ಪ್ರಾರ್ಥಿಸುವುದು ನಮ್ಮ ಚರ್ಚ್ನ ಸಂಸ್ಕೃತಿ ಮತ್ತು ಸಂಪ್ರದಾಯದ ಒಂದು ಭಾಗವಾಗಿದೆ. ವಾಸ್ತವವಾಗಿ, ಅದನ್ನು ಹೇಗೆ ಮಾಡಬೇಕೆಂದು ನಿಮಗೆ ತಿಳುಸುವ ಕಿರುಪುಸ್ತಕವನ್ನು ನೀವು ಶೀಘ್ರದಲ್ಲೇ ಪಡೆಯುತ್ತೀರಿ. ನಮ್ಮ ಪ್ರಾರ್ಥನೆಯ ಸಮಯದಲ್ಲಿ, ನಾವು ಮಾಡುವ ಒಂದು ಕೆಲಸವೆಂದರೆ ನಮ್ಮ ಬಲಿಪೀಠದ ಮೇಜಿನ ಮೇಲೆ ಮೇಣದಬತ್ತಿಯನ್ನು ಬೆಳಗಿಸುವುದು, ಯೇಸುವು ಲೋಕಕ್ಕೆ ಬೆಳಕಾಗಿದ್ದಾರೆ (ಸಂತ ಯೋಹಾನ ೫: ೧೪-೧೬) ಎಂಬುದನ್ನು ನಾವು ನೆನಪಿಸಲು ಇದನ್ನು ಮಾಡುತ್ತೇವೆ. ನಮ್ಮ ನೆರೆಹೊರೆಯಲ್ಲಿರುವ ಜನರು ಕುಟುಂಬದಲ್ಲಿ ನೀವು ಪ್ರಾರ್ಥಿಸುತ್ತೀರಾ ಎಂದು ಕಂಡುಕೊಂಡಾಗ, ಅವರ ಮಗು ಅನಾರೋಗ್ಯದಲ್ಲಿರುವಾಗ, ಅವರ ಮಗು ಪರೀಕ್ಷೆ ಬರೆಯುವಾಗ ಅಥವಾ ಇನ್ನಾವುದೇ ಸಮಸ್ಯೆ, ಅಗತ್ಯವಿದ್ದಾಗ ಅವರು ಖಂಡಿತವಾಗಿಯೂ ನಿಮ್ಮ ಬಳಿಗೆ ಬರುತ್ತಾರೆ. ಈ ರೀತಿಯಲ್ಲಿ ನೀವು ಯೇಸುವಿಗೆ ಸಾಕ್ಷಿಯಾಗಿರುತ್ತೀರಿ.

ಕರ್ತನಾದ ಯೇಸುಕ್ರಿಸ್ತನ ಕುರಿತಾಗಿ ಅವರ ಪ್ರೀತಿಯ ಮತ್ತು ಕ್ರಿಯೆಗಳ ಕುರಿತಾಗಿ ಜನರಿಗೆ ಹೇಳುವ ಮೂಲಕವಾಗಿ ನಾವು ಸಾಕ್ಷಿಗಳಾಗಲು ಕರೆಯಲ್ಪಟ್ಟಿದ್ದೇವೆ. ಇದನ್ನು ಮಾಡಲು ಒಂದು ಮಾರ್ಗವೆಂದರೆ ಚರ್ಚ್ ಮತ್ತು ಸಮುದಾಯಕ್ಕೆ ಸೇವೆಯನ್ನು ಸಲ್ಲಿಸಲು ಯುವಕ ಮತ್ತು ಯುವತಿಯರನ್ನು ಕಳುಹಿಸಬೇಕು. ನಮ್ಮ ಕರುಣೆಯ ಸಹೋದರಿಯರು ಬಡವರಿಗೆ, ವಿಧವೆಯರಿಗೆ, ರಸ್ತೆಗಳಲ್ಲಿ ವಾಸಿಸುವ ಮಕ್ಕಳಿಗೆ, ಕೈಬಿಡಲ್ಪಟ್ಟವರಿಗೆ, ಕುಷ್ಠರೋಗದಿಂದ ಬಳಲುತ್ತಿರುವವರಿಗೆ ಮತ್ತು ಇತರರಿಗೆ ಸಹಾಯವನ್ನು ಮಾಡುವ ಮೂಲಕವಾಗಿ ಸೇವೆಯನ್ನು

ಮಾಡುತ್ತಿದ್ದಾರೆ. ಪವಿತ್ರ ಚರ್ಚ್ನಲ್ಲಿ ಕರುಣೆಯ ಸಹೋದರಿಯಾಗಲು ನಿಮ್ಮ ಹೆಣ್ಣುಮಕ್ಕಳಲ್ಲಿ ಒಬ್ಬರು ದೇವರಿಂದ ಆಯ್ಕೆಯಾಗಬೇಕೆಂದು ನೀವು ಯಾಕೆ ಪಾರ್ಥಿಸಬಾರದು? ನಿಮ್ಮ ಚರ್ಚ್ನಲ್ಲಿ ಕನಿಷ್ಠ ಒಬ್ಬ ಯುವ ಸಹೋದರಿ ದೇವರ ಸೇವೆಯನ್ನು ಮಾಡಲು ನಿರ್ಧರಿಸಬೇಕೆಂದು ಪ್ರಾರ್ಥಿಸಿರಿ. ನಮ್ಮ ಯುವಕರು ಪವಿತ್ರ ಚರ್ಚಗಾಗಿ ಘನಬೋಧಕರು, ಸುವಾರ್ತಿಕರು ಮತ್ತು ಮಿಷನರಿಗಳಾಗುವ ಮೂಲಕ ತಮ್ಮ ಆಧ್ಯಾತಿಕ ಅಗತ್ಯಗಳನ್ನು ಪೂರೈಸುವುದರಿಂದ ಸಮುದಾಯಕ್ಕೆ ಸೇವೆಯನ್ನು ಸಲ್ಲಿಸಬಹುದು. ಪವಿತ್ರ ಚರ್ಚಗೆ ಸೇವೆ ಸಲ್ಲಿಸಲು ದೇವರು ನಿಮ್ಮ ಪುತ್ರರಲ್ಲಿ ಒಬ್ಬರನ್ನು ಕರೆಯುವಂತೆ ಪ್ರಾರ್ಥಿಸಿರಿ. ನಿಮ್ಮ ಕುಟುಂಬ ಮತ್ತು ಚರ್ಚನಲ್ಲಿರುವ ಯುವಕರಿಗಾಗಿ ಪ್ರಾರ್ಥಿಸಿರಿ, ದೇವರು ಅವರನ್ನು ಪವಿತ್ರ ಚರ್ಚ್ ಮೂಲಕವಾಗಿ ತನ್ನ ಸೇವೆ ಮಾಡಲು ಕರೆಯುತ್ತಿದ್ದಾರೆ. ನಮ್ಮ ಯುವಕರು ಮತ್ತು ಯುವತಿಯರನ್ನು ಚರ್ಚ್ ಮತ್ತು ಸಮುದಾದ ಸೇವೆಗೆ ಕಳುಹಿಸಲು ನಾವು ಬದ್ಧರಾಗೋಣ.

ಕ್ರಿಸ್ತನಲ್ಲಿ ನನ್ನ ಪ್ರೀತಿಯ ಮಕ್ಕಳೇ, ನಾವು ಕರ್ತನಿಗಾಗಿ ಜೀವಿಸಿದರೆ ಮತ್ತು ಆತನ ಸಾಕ್ಷಿಗಳಾಗಿದ್ದರೆ, ಕಿರುಕುಳ, ತಪ್ಪುಗ್ರಹಿಕೆಗಳು ಅಥವಾ ಇತರೆ ಸಮಸ್ಯೆಗಳಿದ್ದರೂ ನಾವು ದುಃಖವನ್ನು ಅನುಭವಿಸಬೇಕಾಗುತ್ತದೆ ಎಂಬುದನ್ನು ದಯವಿಟ್ಟು ನೆನೆಪಿನಲ್ಲಿಡಿರಿ. "ಹೇಗೆಂದರೆ ಕ್ರಿಸ್ತನ ಮೇಲೆ ನಂಬಿಕೆಯಿಡುವುದೂ ಆತನಿಗೋಸ್ಕರ ಬಾಧೆಯನ್ನನುಭವಿಸುವುದೂ ನಿಮಗೆ ಅನುಗ್ರಹವಾಗಿ ದೊರೆಯಿತು" (ಫಿಲಿಪ್ಪಿ ೧:೨೯). ನಮ್ಮ ಜೀವನದಲ್ಲಿ ಆತನ ಚಿತ್ತವನ್ನು ಪೂರೈಸಲು ಮತ್ತು ಆತನ ಕೃಪೆಯಲ್ಲಿ ಪಾಲುಗೊಳ್ಳಲು ಸಮಸ್ಯೆಗಳು ಮತ್ತು ಸಂಕಟಗಳು ಕ್ರಿಸ್ತನಿಂದ ದೊರೆತ ಉಡುಗೊರೆ ಎಂದು ದಯವಿಟ್ಟು ಯೋಚಿಸಿರಿ.

ನಾವು ಯಾವಗಲೂ ಪ್ರಾರ್ಥಿಸಿದಂತೆಯೇ ನಮ್ಮ ನಾಯಕರಿಗಾಗಿ ಮತ್ತು ನಮ್ಮ ದೇಶಕ್ಕಾಗಿ, ರಾಜ್ಯಗಳಿಗಾಗಿ, ನೆರೆಹೊರೆ ರಾಷ್ಟ್ರಗಳಲ್ಲಿ ಶಾಂತಿ ಮತ್ತು ಸಮೃದ್ಧಿ ನೆಲೆಸುವಂತೆ ಪಾರ್ಥಿಸುತ್ತಲೇ ಇರೋಣ.

ನಾವು ಎಲ್ಲದರಲ್ಲೂ ಉತ್ತಮವಾಗಿರೋಣ ಮತ್ತು ಆರೋಗ್ಯವಾಗಿರೋಣ, ನಮ್ಮ ಆತ್ಮಗಳು ಮಾಡುವಂತೆ (೩ ಯೋಹಾನ ೨), ಮತ್ತು ನಾವು ಆತನಿಗಾಗಿ ಜೀವಿಸುವಂತೆ ಪವಿತ್ರಾತ್ಮನು ನಮ್ಮನ್ನು ಬಲಪಡಿಸಲಿ.

ಪವಿತ್ರ ಚರ್ಚ್ ಸೇವೆಯಲ್ಲಿ,

ಕ್ರಿಸ್ತನಲ್ಲಿ ನಿಮ್ಮ ತಂದೆ,

ದಿನಾಂಕ: ೦೨ ಮೇ ೨೦೨೩

ಸ್ಥಳ: ಪವಿತ್ರ ಸಿನಡ್

+Athanasius Yohan M

ಅಥನೇಷಿಯಸ್ ಯೋಹಾನ್ ಪ್ರಥಮ ಮೆಟ್ರೋಪಾಲಿಟನ್